ಹೊತ್ತಿಗೆ ಗೊತ್ತಾಗಿ, ಅಲ್ಲಿಯ ತನಕ ಹೋಗುವುದು ಹೇಗೆಂದು ಒದ್ದಾಡುತ್ತಿದ್ದಾಗ 'ನೀ ಹೆದ್ರಡ. ಯನ್ ಮಗ ಬಿಡ್ತ್ನ ನಿನ್ನ. ನಮ್ ಜೊತಿಗೆ ಬಾ' ಎಂದಿದ್ದರು ಅದೇ ಮದುವೆಯಲ್ಲಿದ್ದ ಶ್ರೀಮುಖನ ಅಮ್ಮ. ಅಲ್ಲಿಂದ ಮುಂದಿನ ಅವಳ ಒಂದೂವರೆ ಗಂಟೆ ಶ್ರೀಮುಖನ ಅಮ್ಮ ಹಾಗೂ ಶ್ರೀಮುಖನ ಜೊತೆ ಕಳೆದಿತ್ತು. ಹೊಳೆದಂಡೆಯ ಕೆಂಬಿಸಿಲಿನಲ್ಲಿ ನೆಲದೊಳಗಿನಿಂದಲೇ ಎದ್ದು ಬಂದ ನೈಸರ್ಗಿಕ ರಚನೆಯೇನೋ ಎಂಬಂತೆ ನಿಂತಿದ್ದ, ಹಂಚು ಹೊದಿಸಿದ, ದಬ್ಬೆಯ ಮರೆ ಕಟ್ಟಿದ್ದ ಅಂಗಡಿಯ ಅಂಗಳದಲ್ಲಿ ಕುಳಿತು, ಶ್ರೀಮುಖ ಮಾಡಿ ಕೊಟ್ಟ ಚಾ ಹೀರುತ್ತಾ ಹಿನ್ನೀರಿನಲ್ಲಿ ಏಳುವ ಅಲೆಗಳನ್ನೇ ನೋಡುತ್ತಾ ಕುಳಿತಿದ್ದವಳ ಕಣ್ಣಿಗೆ ಕಾಡಿನ ಮರವೊಂದು ಅಂಗಿ, ಲುಂಗಿ ತೊಟ್ಟುಕೊಂಡು ಎದ್ದು ಬಂದಂತೆ ಕಂಡಿದ್ದ ಶ್ರೀಮುಖ. 'ಅ' ಅಕ್ಷರವನ್ನು ಅರ್ಧ ನುಂಗಿ 'ಮ್ಮಾ... ಮ್ಮಾ...' ಎಂದು ಕರೆಯುವ ಅವನು ಹಾಗೂ ಯಾವುದೋ ಹಳೆಯ ಜನ್ಮದ ಗೆಳೆಯನೊಟ್ಟಿಗೆ ಹರಟುವಂತೆ ಅವನೊಟ್ಟಿಗೆ ನಗು ನಗುತ್ತಾ ಮದುವೆ ಮನೆಗೆ ಬಂದ ಹುಡುಗಿಯರ ಬಗ್ಗೆ, ಅವರ ಥಳಕು ಬಳಕು ನಡಿಗೆಯ ಬಗ್ಗೆ ಹರಟುವ ಅವನ ಅಮ್ಮ... ಅದೇಕೋ ಲಾಂಚು ಹತ್ತಿ ನದಿ ದಾಟಿದ ಮೇಲೂ ಈ ಇಬ್ಬರ ಚಿತ್ರ ಅವಳ ಮನಸ್ಸಿನಲ್ಲೇ ಕುಳಿತುಬಿಟ್ಟಿತ್ತು. 'ಇವತ್ತು ಭಾನ್ವಾರ. ಬಸ್ಸು ಬಂದೇ ಬಿಡ್ತು ಹೇಳಲಾಗ್ತಿಲ್ಲೆ. ಬರ್ಲೇ ಹೇಳ್ರೆ ಶ್ರೀಮುಖಂಗೊಂದ್ ಕಾಲ್ ಮಾಡು ಕೂಸೇ. ನಾಚ್ಕೆ ಮಾಡ್ಕಳಡ. ಅಂವ ನಿನ್ನ ಸಾಗ್ರ ತಲುಪ್ಸೋ ವ್ಯವಸ್ಥೆ ಮಾಡ್ತ್' ಎಂದಿದ್ದ ಅಮ್ಮ ಹಾಗೂ ಬ್ಯಾಗು ಹೊತ್ತುಕೊಂಡು ಲಾಂಚಿನ ಬಾಗಿಲಿನ ತನಕ ಬಂದು ಕೈ ಬೀಸಿ ಕಳಿಸಿದ್ದ ಶ್ರೀಮುಖ... ಈ ಇಬ್ಬರೂ ತಾನು ಹಿಂದೆಂದೋ ಭೇಟಿಯಾಗಿ, ಒಡನಾಡಿ, ಈ ನಡುವೆ ಅಗಲಿದ ವ್ಯಕ್ತಿಗಳೇನೋ ಎಂದೆನಿಸಿತ್ತು.

ವಯಸ್ಸು ಮೂವತ್ತೈದು ದಾಟಿಯೂ ಮದುವೆಯಾಗದ ಎಲ್ಲ ಹುಡುಗಿಯರಿಗೂ ಹೀಗೇ ಅನಿಸುತ್ತದಾ? ಅವರೂ ಹೀಗೇ ಎಲ್ಲೋ ಸಿಕ್ಕ ಅಪರಿಚಿತರನ್ನು ಸುಮ್ಮ ಸುಮ್ಮನೆ ಹಚ್ಚಿಕೊಳ್ಳುತ್ತಾರಾ? ಹಾಗಂತ ತನ್ನನ್ನು ತಾನೇ ಕೇಳಿಕೊಂಡಿದ್ದಳು ಮನೋಹರಿ. ಬೆಂಗಳೂರು ಎನ್ನುವ ಮಹಾನಗರಿ ಹಾಗೂ ಉದ್ಯೋಗ ಎನ್ನುವ ಸ್ವಾವಲಂಬನೆ... ಇವೆರಡೂ ಬರುವ ಮುನ್ನ, ನೀರಿಗೆ ಬಿದ್ದ ತರಗೆಲೆಯಂಥಾ ಬದುಕು ಬದುಕಿಬಿಟ್ಟವಳು ಅವಳು. ಆಗಿನ್ನೂ ಆಕೆ ಪಿಯೂಸಿಯಲ್ಲಿದ್ದಳು. ಕೆಲಸಕ್ಕೆಂದು ಮೈಸೂರಿನ ಮನೆಯಿಂದ ಆಗಷ್ಟೇ ಹೋಗಿದ್ದ ಅಪ್ಪ ಸಾವಿನ ಸುದ್ದಿಯಾಗಿ ಹತ್ತೇ ನಿಮಿಷಕ್ಕೆ ಮರಳಿದ್ದ. ಅಳುವುದಕ್ಕೂ ತಯಾರಿಯಿಲ್ಲದಂಥಾ ಆಘಾತ! ಶವ ಸಂಸ್ಕಾರ ಮಾಡಿ ಹಿಂದೆ ಬಂದ ಆ ದಿನ ಅಪ್ಪನ ಜೊತೆಗೇ ಅಮ್ಮನನ್ನೂ ಕಳೆದುಕೊಂಡೆ ಅಂತ ಈಗಲೂ ಅವಳಿಗೆ ಅನಿಸುತ್ತದೆ. ಆದ ಆಘಾತಕ್ಕೋ ಅಥವಾ ಇನ್ಯಾವ ಕಾರಣಕ್ಕೋ, ಆ ದಿನದಿಂದ ಅಮ್ಮ ಬದಲಾಗಿದ್ದಳು. ಬೆಳಗ್ಗೆ ಎದ್ದವಳು ತಿಂಡಿಯನ್ನೇ ಮಾಡದೇ ಎತ್ತಲೋ ಹೋಗಿಬಿಡುತ್ತಿದ್ದಳು. ಇದ್ದರೂ ದೇವರ ಪೂಜೆಯಲ್ಲೇ ಗಂಟೆಗಳನ್ನು ಕಳೆಯುತ್ತಿದ್ದಳೇ ಹೊರತು ಕಾಲೇಜಿಗೆ ಹೋಗುವ ಮಕ್ಕಳಿಗೆ ತಿಂಡಿ, ಕಾಫಿ ಏನನ್ನೂ ಕಾಯಿಸುತ್ತಿರಲಿಲ್ಲ. ಹಾಗೆ ಬೇಯಿಸಿದರೂ ತನಗೆ ಸಾಕಾಗುವಂತೆ ಎರಡೋ ಮೂರೋ ಚಪಾತಿ ಮಾಡಿಕೊಳ್ಳುತ್ತಿದ್ದಳು. ಮೊದಲ ಸಲ ಮನೋಹರಿ ತಿಳಿಯದೇ ಅದನ್ನು ತಿನ್ನಲು ಹೋದಾಗ ಅವಳ ಕೆನ್ನೆ ಕೆನ್ನೆಗೆ ಏಟು ಬಿದ್ದಿತ್ತು. ಅಂದಿನಿಂದ ಅವಳು ಹಾಗೂ ಅಕ್ಕ ತಮ್ಮ ತಿಂಡಿ, ಮಧ್ಯಾಹ್ನದ ಊಟಗಳನ್ನು ತಾವೇ ಮಾಡಿಕೊಂಡು ಹೋಗಲು ಕಲಿತಿದ್ದರು. ಸಂಜೆ ಮರಳಿ ಬರುವ ಹೊತ್ತಿಗೆ ಅವರಿಲ್ಲದಾಗ ಅಮ್ಮ ಮಾಡಿಕೊಂಡು ತಿಂದ ತಿಂಡಿಯ ಘಮ ಇಡೀ ಅಡುಗೆ ಮನೆಯುದ್ದಕ್ಕೂ ಪಸರಿಸಿರುತ್ತಿತ್ತು. ಅಪ್ಪನ ನೌಕರಿ ಅಣ್ಣನಿಗೆ ಸಿಕ್ಕಿದ್ದರಿಂದ ಅವನು ದೂರದ ಹುಬ್ಬಳ್ಳಿಯ ಪಾಲಾಗಿದ್ದ. ಎರಡೋ ಮೂರೋ ತಿಂಗಳಿಗೆ ಸಿಹಿ ತಿಂಡಿಯ ಪೊಟ್ಟಣಗಳ ಜೊತೆ ಬಂದು, ಎರಡು ದಿನ ಇದ್ದು, ಭಾನುವಾರದ ಸಂಜೆಗಳಲ್ಲಿ ಹೊರಟು ನಿಲ್ಲುತ್ತಿದ್ದ ಅವನನ್ನು ಮನೋಹರಿ ತಬ್ಬಿಕೊಂಡು ಅಳುತ್ತಿದ್ದಳು. ಅವನಾದರೂ ತೀರಿಹೋದ ಅಪ್ಪನನ್ನೇ ಆವಾಹಿಸಿಕೊಂಡಂತೆ ಅಷ್ಟೇ ಪ್ರೀತಿಯಲ್ಲಿ ತಲೆ ನೇವರಿಸಿ, ಐಸ್ಕ್ರೀಮು ತಂದು ತಿನ್ನಿಸಿ, ಹೊರಡುತ್ತಿದ್ದ.

ಅಪ್ಪನ ಸಾವು ಅಮ್ಮನ, ಈ ಲೋಕದೊಟ್ಟಿಗಿನ ಯಾವುದೋ ಕೊಂಡಿಯನ್ನು ಕಳಚಿ ಹಾಕಿತ್ತು. ಅವಳೀಗ ಸುಖಾ ಸುಮ್ಮನೆ ವ್ಯಗ್ರಳಾಗುತ್ತಿದ್ದಳು. ಅಪ್ಪನ ಹಠಾತ್ ನಿರ್ಗಮನದಿಂದುಂಟಾದ ಖಾಲಿತನವನ್ನು ಅವಳಿಂದ ತುಂಬಿಕೊಳ್ಳಲು ನೋಡುತ್ತಿದ್ದ ಮನೋಹರಿಗೆ ಅದರ ಬದಲಿಗೆ ಲತ್ತೆಗಳು ದೊರಕುತ್ತಿದ್ದವು. ಕೈ